


**ಸೋಲಿಗ ಚಿತ್ರಗಳು**
(ಆದಿವಾಸಿಗಳ ಬದುಕಿನೊಂದಿಗಿನ ಸ್ಮೃತಿಚಿತ್ರಗಳು)
ಲೇ: ಜಿ.ಎಸ್. ಜಯದೇವ
ಪು: 324 ಬೆ: 320
ಪ್ರ: ಪರಸ್ಪರ ಪ್ರಕಾಶನ
ಚಿಕ್ಕನಹಳ್ಳಿ, ವಿಶ್ವೇಶ್ವರಯ್ಯ ಬಡಾವಣೆ 2ನೇ ಹಂತ,
ಸೂಲಿಕೆರೆ ಅಂಚೆ,
ಬೆಂಗಳೂರು – 560 060
ದೂರವಾಣಿ: 8884151513

**'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**

ಎಚ್. ದಂಡಪ್ಪ

# ಆದಿವಾಸಿಗಳ ಬದುಕಿನ ನೈಜ ಕಥನ

ಪ್ರೊ. ಜಿ.ಎಸ್. ಜಯದೇವ ಅವರ ಹೆಸರು ಕರ್ನಾಟಕದ ಸಮಾಜ ಸೇವಾ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. 1973ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಜೀವಶಾಸ್ತ್ರ ವಿಷಯದಲ್ಲಿ ಎಂ.ಎಸ್ಸಿ. ಸ್ನಾತಕೋತ್ತರ ಪದವಿ ಪಡೆದು, ಚಾಮರಾಜನಗರದ ಜೆ.ಎಸ್.ಎಸ್. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದು, ಆಮೇಲೆ ಅದಕ್ಕೆ ರಾಜೀನಾಮೆ ಕೊಟ್ಟು ಅಲ್ಲಿಯೇ ನಲವತ್ತು ವರ್ಷಗಳಿಂದ ಬಡ ಮಕ್ಕಳ ಮತ್ತು ಮಹಿಳೆಯರ ಪುನರ್ವಸತಿ ಕೇಂದ್ರ ನಡೆಸುತ್ತಿದ್ದಾರೆ. ಜೊತೆಗೆ, ಚಾಮರಾಜನಗರದಲ್ಲಿ ಅವರು ನಡೆಸುತ್ತಿರುವ ಶಾಲೆ ಶ್ರೇಷ್ಠ ದರ್ಜೆಯ ಕನ್ನಡ ಮಾಧ್ಯಮ ಶಾಲೆಯಾಗಿದೆ. 1978ರಲ್ಲಿ ಅವರಿಗೆ ಬಿಳಿರಂಗನ ಬೆಟ್ಟದ ಆದಿವಾಸಿಗಳಾದ ಸೋಲಿಗರ ಪರಿಚಯವಾಯಿತು. ಡಾ. ಸುದರ್ಶನ್ ಅವರೊಂದಿಗೆ ವಿವೇಕಾನಂದ ಗಿರಿಜನ ಕೇಂದ್ರ ಸ್ಥಾಪಿಸಿ, ಸೋಲಿಗರೊಂದಿಗೆ ಬಾಂಧವ್ಯ ಬೆಳೆಸಿಕೊಂಡರು. ಅಂದಿನಿಂದ ಇಂದಿನವರೆಗೂ ಜಯದೇವ್, ಡಾ. ಸುದರ್ಶನ್ ಮತ್ತು ಅವರ ಸಂಗಡಿಗರು ತಮ್ಮ ಸುಖಸಂಪತ್ತನ್ನು ಮರೆತು ಕಾಡಿನಲ್ಲಿರುವ ಬುಡಕಟ್ಟು ಸೋಲಿಗರ ಸುಖ,